# ವಿಶ್ವ ದರ್ಶನ


ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ

1-11-2025 ಶನಿವಾರ | ಸಂಪುಟ-3 | ಸಂಚಿಕೆ- 3 | ಪುಟಗಳು-2


## ನುಡಿಮುತ್ತು

**ನಗುವ ಮತ್ತು ಕರುಣಾಮಯಿಯಾಗಿರುವ ಅವಕಾಶ ದೊರೆತಿರುವುದು ಮಾತ್ರ ಮನುಷ್ಯನನ್ನು ಪ್ರಾಣಿಗಿಂತ ಉತ್ತಮ ಎನಿಸುವಂತೆ ಮಾಡುತ್ತದೆ.**

# ಕನ್ನಡ ಎನೆ ಕುಣಿದಾಡುವುದೆನ್ನೆದೆ...



"ಕನ್ನಡ ಕನ್ಯೆಯ ಕಂದನು ನಾನು,ಕನ್ನಡ ನುಡಿಯನೇ ನುಡಿಯುವೆನು,ವಿಧ ವಿಧ ಭಾಷೆಯ ಕಲಿತರೂ ಕೂಡಾ ಕನ್ನಡತನವನೇ ನೆನೆಯುವೆನು "ಎಂದು ಹಾಡುವ ಕನ್ನಡಿಗರು ನಾವು. ನವೆಂಬರ್ 1 ಬಂತು ಎಂದರೆ ಪ್ರತಿಯೊಬ್ಬ ಕನ್ನಡಿಗನಿಗೂ ಹೆಮ್ಮೆಯ ದಿನ. ಗಂಗ, ಕದಂಬ,ಚಾಲುಕ್ಯ, ರಾಷ್ಟಕೂಟ ಸೇರಿದಂತೆ ಅನೇಕ ವೀರ ರಾಜಮನೆತನಗಳಿಂದ ಆಳಲ್ಪಟ್ಟ ಕನ್ನಡ ನೆಲವನ್ನು 'ಮೈಸೂರು ಸಂಸ್ಥಾನ ಎಂದು ಕರೆಯುತ್ತಿದ್ದರು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಈ ಹೆಸರು ಬದಲಾಗಿ' ಮೈಸೂರು ಪ್ರಾಂತ್ಯ'ಎಂದು ಕರೆಯಲ್ಪಟ್ಟಿತು. ದೇಶಕ್ಕೆ ಸ್ವತಂತ್ರ ಬಂದ ನಂತರ ಬಾಂಬೆ, ಹೈದ್ರಾಬಾದ್,

ಮದ್ರಾಸ್, ಕೇರಳ ಪ್ರಾಂತ್ಯದಲ್ಲಿದ್ದ ಕನ್ನಡಿಗರ ನಾಲ್ಕು ಭೂ-ಪ್ರದೇಶಗಳನ್ನು 'ಹಳೇ ಮೈಸೂರು ರಾಜ್ಯ'ಕ್ಕೆ ಸೇರಿಸಲ್ಪಟ್ಟು ದಿನಾಂಕ 1956 ನವೆಂಬರ್ 1 ರಲ್ಲಿ ವಿಶಾಲ ಮೈಸೂರು ರಾಜ್ಯ ಉದಯವಾಯಿತು. ಬಳಿಕ 1973 ರ ನವೆಂಬರ್ 1 ರಂದು ರಾಜ್ಯಕ್ಕೆ "ಕರ್ನಾಟಕ"ವೆಂದು ಪುನರ್ ನಾಮಕರಣ ಮಾಡಲಾಯಿತು. ಆಗಿನ ಮುಖ್ಯಮಂತ್ರಿಯಾಗಿದ್ದ ದೇವರಾಜ್ ಅರಸು ಅವರು ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದ್ದರು.ದಿಕ್ಕು ದಿಕ್ಕಿನಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡಿಗರಿಗಾಗಿ ಒಂದು ರಾಜ್ಯ ಉದಯವಾದ ಹಿನ್ನೆಲೆಯಲ್ಲಿ ಪ್ರತಿವರ್ಷ ನವೆಂಬರ್ ಒಂದರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಾ ಬರಲಾಗಿದೆ.



### ಕನ್ನಡ ನಾಡು ನುಡಿ ಇತಿಹಾಸ

ಕನ್ನಡ ಎಂದ ತಕ್ಷಣ ನಮ್ಮ ಮೈಮನಗಳಲ್ಲಿ ಹೊಸ ರೋಮಾಂಚನದ ಅಲೆ ಹುಟ್ಟಿಕೊಳ್ಳುತ್ತದೆ. ನಮ್ಮ ನಾಡು ನುಡಿಗಿರುವ ಅದ್ಭುತ ಶಕ್ತಿ ಅಂತಹದ್ದು.ಸುಮಾರು 1500 ವರ್ಷಕ್ಕೂ ಹೆಚ್ಚು ಇತಿಹಾಸವನ್ನು ಹೊಂದಿರುವ ಈ ಭಾಷೆ ಕೇಂದ್ರ ಸರ್ಕಾರದಿಂದ 'ಅಭಿಜಾಭಾಷೆ'ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.ಶಾಸ್ತ್ರೀಯ ಭಾಷೆಯಾಗಿರುವ ಕನ್ನಡಕ್ಕೆ ಇಪ್ಪತ್ತಕ್ಕೂ ಹೆಚ್ಚು ಉಪಭಾಷೆಗಳಿವೆ.ಕನ್ನಡ ಎಂದರೆ ಹೇಳದೇ ಎದೆಯಲ್ಲಿ ಹುಟ್ಟಿಕೊಳ್ಳುವ ಅಭಿಮಾನದ ಕುಲುಮೆಗೆ ಕನ್ನಡ ಭಾಷೆಯ ಶ್ರೀಮಂತಿಕೆಯೇ ಸಾಕ್ಷಿ.

ಕ್ರಿ.ಶ. ಆರನೇ ಶತಮಾನದ ಮಧ್ಯಭಾಗದಲ್ಲಿ ಪ್ರಾಕೃತ ಭಾಷೆಯನ್ನು ಬಳಸುತ್ತಿದ್ದರೂ ಕೂಡ,ಕನ್ನಡ ಭಾಷೆಯನ್ನ ತಮ್ಮ ಆಡಳಿತ ಭಾಷೆಯನ್ನಾಗಿ ಪರಿಗಣಿಸಿದ ರಾಜಮನೆತನಗಳು ಕರ್ನಾಟಕದಲ್ಲಿ ಸಾಕಷ್ಟಿವೆ.ಕದಂಬರ ಹಲ್ಮಿಡಿ ಶಾಸನ, ಚಾಲುಕ್ಯರ ಬಾದಾಮಿ ಗುಹಾ ಶಾಸನಗಳು ನಮ್ಮ ಕನ್ನಡ ಭಾಷೆಗೆ ಇರುವ ಎರಡು ಅತೀ ಪುರಾತತ್ವ ದಾಖಲೆಗಳು. ಕನ್ನಡ ಭಾಷೆಯನ್ನ ಆಡುಭಾಷೆಯಾಗಿ 2500 ವರ್ಷಗಳಿಂದ ಬಳಸಲಾಗುತ್ತಿದೆ. 1500 ವರ್ಷಗಳ ಹಿಂದೆ ಇಂಗ್ಲಿಷ್ ಇನ್ನೂ ಅಂಬೆಗಾಲು ಇಡುತಿದ್ದ ಕಾಲದಲ್ಲಿಯೇ ನಮ್ಮ ಕನ್ನಡ ಭಾಷೆಗೆ ತನ್ನದೇ ಆದ ಸ್ವಂತ ಲಿಪಿ ಇತ್ತು. ಕುಮುದೇಂದು ಮುನಿ 'ಸಿರಿಭೂವಲಯ' ಗ್ರಂಥದಲ್ಲಿ ಕನ್ನಡ ಭಾಷೆಗೆ ವಿಶ್ವದ ಎಲ್ಲಾ ಭಾಷೆಗಳನ್ನು ಅಡಗಿಸಿಕೊಳ್ಳುವ ಶಕ್ತಿ ಇದೆ ಎಂದು ಸಾಬೀತುಪಡಿಸಿದ್ದಾರೆ.ದ್ರಾವಿಡ ಭಾಷೆಯ 20 ಕ್ಕೂ ಹೆಚ್ಚು ಭಾಷೆಗಳಲ್ಲಿ ಕನ್ನಡವೂ ಒಂದು. ಕ್ರಿ.ಶ ಎರಡನೇ ಶತಮಾನದ ಮಧ್ಯದಲ್ಲಿ ಟಾಲೆಮಿ ಕರ್ನಾಟಕದ ಹೆಸರುಗಳ ಬಗ್ಗೆ ಮಾತನಾಡುತ್ತಾರೆ. ಅವುಗಳೆಲ್ಲ ಕರ್ನಾಟಕದ ಸ್ಥಳಗಳ ಮೂಲ ಹೆಸರುಗಳು.ಇದರರ್ಥ ಆ ಸಂಧರ್ಭದಲ್ಲಿಯೇ ಶುದ್ಧ ಕನ್ನಡದ ಹೆಸರುಗಳ ಊರುಗಳಿದ್ದವು.ಬಾದಾಮಿಯಲ್ಲಿರುವ ಕಪ್ಪೆ ಅರಭಟ್ಟನ ಶಾಸನ ಕ್ರಿ.ಶ. 700 ರಲ್ಲಿ ದೊರೆತಿದ್ದು ಇದು ತ್ರಿಪದಿ ಮಾಪಕದ ಮೊದಲ ಕನ್ನಡ ಕಾವ್ಯವಾಗಿದೆ .ಮಹಾಭಾರತದ ಬೀಷ್ಮಪರ್ವ ಮತ್ತು ಸಭಾಪರ್ವಗಳಲ್ಲಿ 'ಕರ್ಣಾಟ' ಎಂಬ ಶಬ್ದವನ್ನ ಬಳಸಿದ ಉಲ್ಲೇಖಗಳು ಕೂಡ ಇದೆ. ಗ್ರೀಕ್ ಭಾಷೆಯ ನಾಟಕ "ಚಾರಿಟೈನ್ ಮೆಮೆ"( ಕ್ರಿ.ಪೂ.250)ದಲ್ಲಿ ಕನ್ನಡದ ಅನೇಕ ನುಡಿಗಟ್ಟಿರುವುದು ಕನ್ನಡ ಭಾಷೆಯ ವ್ಯಾಪಕತೆಗೆ ಇರುವ ಮತ್ತೊಂದು ದಾಖಲೆ.

ಈ ವಿಷಯವನ್ನು ರಾಷ್ಟಕವಿ ಎಂ.ಗೋವಿಂದ ಪೈ ರವರು ದೃಡೀಕರೀಸಿದ್ದಾರೆ. ಹಾಲರಾಜನ ಪ್ರಾಕೃತ ಭಾಷೆಯ ಕೃತಿಯಾದ 'ಗಾಥಾ ಶಬ್ದಸತಿ'ಯಲ್ಲಿ ಶುದ್ಧ ಕನ್ನಡ ಅಕ್ಷರಗಳಿವೆ. ಪ್ರಾಕೃತ, ಆರಾಮಿಕ್ ಮತ್ತು ಗ್ರೀಕ್ ಭಾಷೆಯನ್ನು ಹೊರತು ಪಡಿಸಿ, ಯಾವುದೇ ಭಾಷೆಯಲ್ಲಿ ಸಿಗುವ ಮೊತ್ತ ಮೊದಲ ಶಿಲಾ ಶಾಸನ ಇದು. ಇದು ಕನ್ನಡ ಭಾಷೆಯ ಇತಿಹಾಸಕ್ಕಿರುವ ಹಿರಿಮೆ.

ಇನ್ನೂ ಕ್ರಿ.ಶ. 850 ರ ಹೊತ್ತಿನ ಕನ್ನಡ ಮೊಟ್ಟ ಮೊದಲ ಆಧಾರಗ್ರಂಥ ಎನಿಸಿಕೊಂಡಿರುವ ಕವಿರಾಜಮಾರ್ಗ ಅದಕ್ಕಿಂತ ಹಳೆಯ 8-10 ಬರಹಗಾರರನ್ನು ಹೆಸರಿಸುತ್ತದೆ. ಕ್ರಿ.ಶ. 450ರ ಆಸುಪಾಸಿನಲ್ಲಿ ದುರ್ವಿನೀತ ಎಂಬ ಕನ್ನಡ ಕವಿಯ ಬರಹಗಳ ಬಗ್ಗೆ ಅನೇಕ ಉಲ್ಲೇಖಗಳಿವೆ. ಪದ್ಮಪುರಾಣ ಮತ್ತು ಮಾರ್ಕಂಡೇಯ ಪುರಾಣಗಳಲ್ಲಿ 'ಕರ್ನಾಟಕ'ಎಂಬ ಪದ ಕಾಣಿಸಿಕೊಂಡಿದೆ. ತಮಿಳು ಭಾಷೆಯ ಬಹು ಹಳೆಯ ಕಾವ್ಯವಾದ, ಸಂಗಂ ಯುಗಕ್ಕೆ ಸೇರಿದ, 'ಶಿಲಪ್ಪದಿಕಾರಂ' ಈ ಪ್ರದೇಶದ ಜನರನ್ನು 'ಕರುನಾಡಗರ್' ಎಂದು ಕರೆದಿದೆ. 12 ನೇ ಶತಮಾನದ ನಂತರ ವಚನ ಸಾಹಿತ್ಯ, ರಗಳೆ, ಸಾಂಗತ್ಯ, ಷಟ್ಪದಿಗಳು ಕನ್ನಡ ಸಾಹಿತ್ಯದಲ್ಲಿ ಮೂಡಿ ಬಂದವು. ಇದನ್ನು ನಡುಗನ್ನಡ ಕಾಲ ಎಂದು ಕರೆಯಬಹುದು. ಬಸವಯುಗ, ಕುಮಾರವ್ಯಾಸ ಯುಗಗಳನ್ನು ನಾವು ಇಲ್ಲಿ ಕಾಣಬಹುದು.

ಕ್ರಿ.ಶ. 18 ನೇ ಶತಮಾನದ ಆದಿಯಿಂದ,ಈಗ ಇರುವ ಭಾಷೆಯವರೆಗೆ ಹೊಸಗನ್ನಡವಾಗಿದೆ. ಈ ಕಾಲಘಟ್ಟದಲ್ಲಿ ವಿಮರ್ಶಾ ಸಾಹಿತ್ಯ ಪ್ರಕಾರ ಸೇರಿದಂತೆ, ಕನ್ನಡ ಕೇವಲ ಧಾರ್ಮಿಕ ಗ್ರಂಥಗಳಿಗೆ ಸೀಮಿತವಾಗಿರದೇ, ಸಾಮಾಜಿಕ ಚಿಂತನೆಗಳು,ಮಾನವತಾವಾದ ಸ್ತ್ರೀವಾದಿ ದೃಷ್ಟಿಕೋನಗಳ ಕುರಿತು ಸಾಲು ಸಾಲು ಸಾಹಿತ್ಯದ ಒಳಮುಖಗಳು ಕನ್ನಡದಲ್ಲಿ ಬೆಳಕಿಗೆ ಬಂದಿತು. ಕನ್ನಡ ಭಾಷೆ ಇಂದು ಕೇವಲ ಆಡುಭಾಷೆಯಾಗಿರದೇ ಇಂದು ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದಂತಹ ಸ್ವಂತ ನಿಲುವನ್ನ ಶ್ರೀಮಂತಿಕೆಯನ್ನು ಕಾಯ್ದುಕೊಂಡಿದೆ.

### ಶ್ರೀಮಂತ ಭಾಷೆ ಕನ್ನಡ

ಕನ್ನಡ ಕೇವಲ ಭಾಷೆಯಲ್ಲ. ಅದೊಂದು ಗತ್ತು. ಪ್ರಪಂಚದ ಇತರ ಯಾವುದೇ ಭಾಷೆಯಲ್ಲೂ ಇರದ ವಿಶೇಷತೆ ಹಾಗೂ ವೈಭವ ಕನ್ನಡ ಭಾಷೆಗಿದೆ. ಕನ್ನಡ ಶಬ್ದಕೋಶವನ್ನು ಬರೆದವರು ಕಿಟಲ್ ವಿದೇಶಿ ಬರಹಗಾರನಿಂದ ಶಬ್ದಕೋಶವನ್ನ ಬರೆಸಿಕೊಂಡ ಭಾರತೀಯ ಮೂಲದ ಏಕೈಕ ಭಾಷೆ ಕನ್ನಡವಾಗಿದೆ. 'ವಿಶ್ವ ಲಿಪಿಗಳ ರಾಣಿ' ಎಂಬ ಹೆಗ್ಗಳಿಕೆಗೆ ಪಾತ್ರವಾದ ಭಾರತೀಯ ಭಾಷೆ ಇದಾಗಿದೆ. ಮಾತಾಡುವುದನ್ನೇ ಬರೆಯುವ, ಬರೆಯುವುದನ್ನೇ ಮಾತನಾಡುವ ಭಾಷೆ ಎಂಬ ಹೆಸರಿಗೆ ಪಾತ್ರವಾಗಿದೆ. ಕನ್ನಡ ಭಾಷೆಯ ಮತ್ತೊಂದು ವಿಶೇಷತೆ ಎಂದರೆ ಕನ್ನಡದ ಪ್ರತಿ ಶಬ್ದವೂ ಸ್ವರದಿಂದ ಮುಕ್ತಾಯವಾಗುತ್ತದೆ. ಇದು ರಗಳೆ ಸಾಹಿತ್ಯವನ್ನು ಬಳಸುವ ಏಕೈಕ ಭಾಷೆಯಾಗಿದೆ. ಭಾರತದಲ್ಲಿಯೇ ಅತೀ ಹೆಚ್ಚು ಸಾಹಿತ್ಯ ರತ್ನ ಪ್ರಶಸ್ತಿ ಬಂದಿದ್ದು ಕನ್ನಡಿಗರಾದ ಕುವೆಂಪುರವರಿಗೆ.

ಇನ್ನೊಂದು ಹೆಮ್ಮೆಯ ವಿಶೇಷವೆಂದರೆ ವಿಕಿಪೀಡಿಯ ಲೋಗೋದಲ್ಲಿ ಕಾಣಿಸಿಕೊಂಡೀರುವ ಭಾರತೀಯ ಭಾಷೆಗಳಲ್ಲಿ ಕನ್ನಡವೂ ಒಂದು.ಕನ್ನಡದ ರಾಷ್ಟ್ರಕವಿಗಳಲಿ ಒಬ್ಬರಾದ ಗೋವಿಂದ ಪೈ ಅವರು ಮೂಲತಃ ಕೇರಳದ ಕೊಂಕಣಿಯವರು. ಅತ್ಯಧಿಕ ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದುಕೊಂಡ ಭಾರತೀಯ ಭಾಷೆ ಇದಾಗಿದೆ.ಇಷ್ಟೇ ಅಲ್ಲದೇ ಕನ್ನಡ ಭಾಷೆ ತಾರ್ಕಿಕ ಹಾಗೂ ವೈಜ್ಞಾನಿಕವಾಗಿ ಪರಿಪೂರ್ಣ ಎಂಬುದು ಸಾಬೀತಾಗಿದೆ.

ಪುಟ 2ರಲ್ಲಿ...

## ಸ್ತ್ರೀ ಎಂದರೆ ಅಷ್ಟೇ ಸಾಕೆ?

ಹೆಣ್ಣು ಹೆಣ್ಣಾಗಿ ಜಯಿಸಬೇಕು, ಅದುವೇ ನಿಜವಾದ ವಿಜಯ ದಶಮಿ" ಎಂಬ ಮಾತು ನಿಜಕ್ಕೂ ಸತ್ಯವಾದದ್ದು.ಹೆಣ್ಣು"ಸ್ತ್ರೀ, ವಿಜಯ ಸ್ತ್ರೀ "ಆಗುವುದು ಯಾವಾಗ ಎಂದು ಕೆಣಕಿದಂತೆ ಅನಿಸಿತು.ಹೆಣ್ಣು ಸೃಷ್ಟಿಯ ಜೀವಾಳ. ।ಸಾಮರ್ಥ್ಯ,ಗುಣ, ಗೌಣ ಸಾಮಿಪ್ಯಗಳ ಸಮುದ್ರವೂ ಹೌದು.ಹೆಣ್ಣಿನ ಪೂಜನೀಯ ಸ್ಥಾನದ ಹಿಂದಿರುವ ಇತಿಹಾಸದ ವೈಖರಿಯೇ ಹಾಗಿದೆ.ಒಂದು ಸಮಾಜದಲ್ಲಿ, ಒಂದು ಕುಟುಂಬದಲ್ಲಿ ತನ್ನೆಲ್ಲ ಶಕ್ತಿ ಮೀರಿ ತನ್ನನ್ನು ತಾನು ತೊಡಗಿಸಿಕೊಂಡಾಗ ಆಕೆಯನ್ನು ಸ್ತ್ರೀ ಎಂದೆವು, ಶಕ್ತಿ ಎಂದೆವು, ಆದರೆ ನಮ್ಮ ಸಮಾಜ ಆಕೆಯನ್ನು ಹೆಣ್ಣಾಗಿ ಗೆಲ್ಲಲು ಬಿಟ್ಟಿತಾ? ಹೆಣ್ಣಾದರೂ ಹೆಣ್ಣಾಗಿಯೇ ಗೆಲ್ಲಲು ಪ್ರಯತ್ನಪಟ್ಟಳ?

ಒಂದು ಹುಡುಗಿ ಹೇಗಿರಬೇಕು? ಹೇಗಿದ್ದರೆ ಚೆನ್ನ? ಅವಳ ವ್ಯಕ್ತಿತ್ವದ ಮೂಲ ಹೇಗಿರಬಹುದು? ಅವಳು ಹೇಗೆ ಸಾಗಿದರೆ ಸಮಾಜಕ್ಕೆ ಹೊಂದಬಹುದು? ಇದು ಸಮಾಜ ಹೆಣ್ಣನ್ನು,ಅವಳ ವ್ಯಕ್ತಿತ್ವವನ್ನು ಅಳೆಯುವ ರೀತಿ. ತಪ್ಪಲ್ಲ. ಎಲ್ಲವೂ ತೂಕವಿರುವ ಪ್ರಶ್ನೆಗಳೇ.. ಒಂದು ಕಾಲದಲ್ಲಿ ಹೆಣ್ಣಿಗೆ ಮನೆ ಜಗುಲಿಯೇ ವಿಶ್ವವಾಗಿತ್ತು. ಆದರೆ ಇಂದು ಇಡೀ ವಿಶ್ವವೇ ಮನೆ ಜಗುಲಿಯಂತಾಗಿದೆ.ಆದರೆ ರಕ್ಷಣೆ ಎಲ್ಲಿದೆ ಎನ್ನುವುದು ನಿಜಕ್ಕೂ ಭಯ ತರಿಸುವ ಭೀಬತ್ಸ ವಿಚಾರ.

ಹಾಗಾದರೆ ನಮ್ಮ ಮಣ್ಣಿನ ಸಂಸ್ಕೃತಿ ಎತ್ತ ತೂರಿ ಹೋಯಿತು? ಅರ್ಧ ಗಂಟೆಗೆ ಒಬ್ಬಳು ಹೆಣ್ಣುಮಗಳು ದೌರ್ಜನ್ಯದ ಕೂಪದಲ್ಲಿ ಹೇಗೆ ಬಿದ್ದು ಒದ್ದಾಡಿದಳು? ಮಾತು ಆಡಲು ನಿಂತರೆ ನಮ್ಮ ಸುತ್ತ ನಿಂತವರೆಲ್ಲ ಒಳ್ಳೆಯವರೇ ಅನಿಸುತ್ತಾರೆ. ದೌರ್ಜನ್ಯ ಆದಾಗ ಎಲ್ಲರೂ ಕೂಗಾಡುವರೇ. ಸರ್ಕಾರಕ್ಕೆ,ಕಾನೂನಿಗೆ ಬಾಯಿಗೆ ಬಂದಂತೆ ಬೈಯುವರೇ. ಹೋರಾಟ, ಹಾರಾಟ ಎಲ್ಲಿಯವರೆಗೆ? ಯಾವುದೋ ಹೊಸ ಸುದ್ದಿ ಮತ್ತೆ ಹೊಸಿಲಿಗೆ ಬಂದು ನಿಲ್ಲುವವರೆಗೆ.ನಂತರ ಜನರು ಎಲ್ಲವನ್ನ ಮರೆತು ಮೊದಲಿನಂತೆ ಬದುಕುತ್ತಾರೆ.

ಅದು ಹಾಗಿರಲಿ. ಹೆಣ್ಣು ಮನುಪ್ರಣೀತ ಪುರುಷ ಕೇಂದ್ರೀಯ ವ್ಯವಸ್ಥೆಯಲ್ಲಿ ಯಾವಾಗಲೂ ಪುರುಷನಿಂದಲೇ ದೌರ್ಜನ್ಯಕ್ಕೆ ಒಳಗಾಗುತ್ತಾಳೆ ಎಂಬುದು ಕೂಡಾ ಶುದ್ದ ಸುಳ್ಳು. ಹೆಣ್ಣಿಗೆ ಒಂದು ಸಂಸ್ಕಾರ ಎಂಬುದನ್ನು ನಮ್ಮ ಮಣ್ಣು ಕೊಟ್ಟಿದೆ. ಹೆಣ್ಣು ಹೇಗೆ ಮುಂದುವರಿದರೂ "ಹೆಣ್ಣುತನ"ವೆಂಬ ಘಮ ಅವಳ ಸುತ್ತ ಸೂಸುತ್ತಿರಬೇಕು.

ಹೆಣ್ಣಾಗಿ ಉಳಿಯುವುದೆಂದರೇ ಹಳೇ ಕಾಲದ ಗೊಡ್ಡು ಸಂಪ್ರದಾಯಗಳ ಬೆನ್ನಲ್ಲೇ ಜೋತು ಬೀಳಬೇಕಾ? ಎಂಬ ವಾದ ಅನೇಕ ಬುದ್ಧಿ ಜೀವಿಗಳ ತಲೆಯಲ್ಲಿದೆ..ನಿಜಕ್ಕೂ ಇಂತದ್ದೊಂದು ಪ್ರಶ್ನೆಯ ಅಗತ್ಯವಿದೆಯೇ? ನಮ್ಮ ಸಂಸ್ಕೃತಿ ಹೆಣ್ಣು ಮಕ್ಕಳ ಸಾಧನೆಗೆ ಅಡ್ಡಿಯಾಗಿದೆಯೇ. ತಲೆ ಮೇಲೆ ಸೆರಗು ಹೊತ್ತೇ ಸಾಧನೆಗೈದ ಅದೆಷ್ಟು ಹೆಣ್ಣುಮಕ್ಕಳ ಉದಾಹರಣೆಗಳು ನಮ್ಮಲ್ಲಿ ಇಲ್ಲ. ಹೆಣ್ಣು ಮಕ್ಕಳ ಸಾಧನೆಗೆ ಅಡ್ಡ ವಾಗುವುದು ಕೆಲವು ಮೂಡ ಆಚಾರಗಳೇ ಹೊರತು, ನಮ್ಮ ಪರಂಪರೆ ಸಂಸ್ಕೃತಿ ಅಲ್ಲ. ಅದೆಂದಿಗೂ ಹೆಣ್ಣು ಮಕ್ಕಳನ್ನು ಸದಾ ಕಾವಲು ನಿಲ್ಲುವ ದೈವಿಕ ಅಸ್ತ್ರಗಳು.

"ಈ ಶತಮಾನದ ಮಾದರಿ ಹೆಣ್ಣು, ಸ್ವಾಭಿಮಾನದ ಸಾಹಸಿ ಹೆಣ್ಣು "ಎಂದು ಮನೆಯಿಂದ ಹೊರಬಿದ್ದು ಅಧಿಕಾರ ಕರ್ತವ್ಯಗಳನ್ನು ಪಡೆದಿದ್ದಾಳೆ. ಎಲ್ಲಾ ರಂಗದಲ್ಲೂ ಸಫಲತೆ ಕಂಡಿದ್ದಾಳೆ .ಆದರೆ ಅದೇ ಹೆಣ್ಣು ದುಶ್ಚಟಗಳಿಗೆ ದಾಸಿಯಾಗಿ ಸಂಸ್ಕೃತಿ ಎಂಬ ಗೆರೆ ದಾಟಿ ಅನಾಚಾರಕ್ಕೆ ಲಗ್ಗೆ ಇಟ್ಟಿರುವುದು ವಿಪರ್ಯಾಸ. ಸಮಾಜ 'ಇದೆಲ್ಲಾ ಕಾಮನ್'ಎನ್ನುವ ಹಂತಕ್ಕೆ ತಲುಪಿದೆ. ಅದರ ಪರಿಣಾಮ ಇಂದು ವಿಶ್ವದಲ್ಲಿ ನೂರು ಕೋಟಿಗೂ ಅಧಿಕ ಹೆಣ್ಣು ಮಕ್ಕಳು ಸಿಗರೇಟ್ ಹಿಡಿದಿದ್ದಾರೆ.

ಇದು 21 ನೇ ಶತಮಾನ ನೋಡಿ. ಆದರೂ ಇಲ್ಲಿ ಭಾವನೆಗಳು ಬದಲಾಗಿಲ್ಲ. ಹೆಣ್ಣು ಸಾಧಿಸಿದರೆ ಖುಷಿಯೇ. ಆದರೆ ಅದು ಸಂಸ್ಕೃತಿ ಎನ್ನುವುದು ತಲೆ ತಗ್ಗಿಸುವ ರೀತಿ ಇರಬಾರದು. ಅದು ನಮಗೆ ಸಮಂಜಸವೂ ಅಲ್ಲ. ಸಂಸ್ಕಾರ ಎನ್ನುವುದು ಹಣೆಯ ಮೇಲಿದ್ದರೆ ಗೌರವ ಎನ್ನುವುದು ತಾನಾಗಿ ಎದುರು ನಿಲ್ಲುತ್ತದೆ. ಹೆಣ್ಣು ಹೆಣ್ಣಾಗಿ ಜಯಿಸಿದರೆ ಅಂದೇ ನಿಜವಾದ ವಿಜಯದಶಮಿಯಾಗುತ್ತದೆ.

## ಗೋವುಗಳ ಹಬ್ಬ ಗೋಪಾಷ್ಟಮಿ



ಕಾರ್ತಿಕ ಮಾಸದ ಶುಕ್ಲ ಪಕ್ಷದ ಅಷ್ಟಮಿ ತಿಥಿಯಂದು ಗೋಪಾಷ್ಟಮಿ ಹಬ್ಬವನ್ನು ಆಚರಿಸಲಾಗುತ್ತದೆ. ಅದರ ಹೆಸರೇ ಸೂಚಿಸುವಂತೆ, ಈ ದಿನ ಗೋ ಮಾತೆಯನ್ನು ಪೂಜಿಸಲಾಗುತ್ತದೆ. ಹಸುವನ್ನು ಪೂಜಿಸುವುದರಿಂದ 33 ಕೋಟಿ ದೇವತೆಗಳ ಆಶೀರ್ವಾದ ಸಿಗುತ್ತದೆ ಎಂದು ನಂಬಲಾಗುತ್ತದೆ. ಇದು ಮನೆಯಲ್ಲಿ ಸಂತೋಷ, ಸಮೃದ್ಧಿ ಮತ್ತು ಸಾಮರಸ್ಯವನ್ನು ತರುತ್ತದೆ. ಈ ದಿನದಂದು ಶ್ರೀಕೃಷ್ಣನು ಮೊದಲ ಬಾರಿಗೆ ಹಸುಗಳನ್ನು ಮೇಯಿಸಲು ಪ್ರಾರಂಭಿಸಿದನು. ಈ ಸಂದರ್ಭದಲ್ಲಿ ಗೋಪಾಷ್ಟಮಿ ಹಬ್ಬವನ್ನು ಆಚರಿಸಲಾಗುತ್ತದೆ ಎಂಬುದು ಕಥೆಗಳಲ್ಲಿ ಕಂಡುಬರುತ್ತದೆ.

ಶ್ರೀಕೃಷ್ಣನು ಗೋಪಾಷ್ಟಮಿಯಿಂದಲೇ ಗೋ ಚರಣ ಲೀಲೆಯನ್ನು ಪ್ರಾರಂಭಿಸಿದನು. ಅದರ ಹಿಂದೆ ಒಂದು ಕಥೆಯಿದೆ. ಪುರಾಣದ ಪ್ರಕಾರ, ಶ್ರೀಕೃಷ್ಣನಿಗೆ 6 ವರ್ಷ ವಯಸ್ಸಾಗಿದ್ದಾಗ, ಅವನು ತನ್ನ ತಾಯಿ ಯಶೋದೆಗೆ ತಾಯಿ, ಈಗ ನಾನು ಬೆಳೆದಿದ್ದೇನೆ, ಆದ್ದರಿಂದ ಇಂದಿನಿಂದ ನಾನು ಕೂಡ ಹಸುಗಳನ್ನು ಮೇಯಿಸಲು ಹೋಗುತ್ತೇನೆ ಮತ್ತು ಕರುಗಳನ್ನು ಮೇಯಿಸಲು ಹೋಗುವುದಿಲ್ಲ ಎಂದು ಹೇಳುತ್ತಾನೆ. ಆಗ ತಾಯಿ ಯಶೋಧೆ ಇದರ ಬಗ್ಗೆ ಮೊದಲು ಬಾಬಾರ ಬಳಿ ಚರ್ಚಿಸಿ ನಂತರ ನೀನು ಹೋಗಬಹುದು ಎಂದು ಕೃಷ್ಣನಿಗೆ ಹೇಳುತ್ತಾಳೆ. ಯಶೋದಾ ತಾಯಿಯ ಆಜ್ಞೆಯ ಮೇರೆಗೆ ಕೃಷ್ಣನು ಆತುರದಿಂದ ನಂದ ಬಾಬಾರನ್ನು ಕೇಳಲು ಹೋಗುತ್ತಾನೆ. ಆದರೆ ನಂದ ಬಾಬಾರು ಶ್ರೀಕೃಷ್ಣನನ್ನು ಕುರಿತು "ನೀನಿನ್ನು ಚಿಕ್ಕವನಿದ್ದೀಯಾ, ಆದ್ದರಿಂದ ಕರುಗಳಿಗೆ ಆಹಾರವನ್ನು ನೀಡಿದರೆ ಸಾಕು" ಎಂದು ಹೇಳುತ್ತಾರೆ, ಆದರೆ ಕೃಷ್ಣನು ತನ್ನ ನಿರ್ಧಾರದಲ್ಲಿ ಅಚಲವಾಗಿದ್ದನು. ಮಗುವಿನ ಒತ್ತಾಯವನ್ನು ನೋಡಿದ ನಂದ ಬಾಬಾರು, "ಸರಿ ಸರಿ...ಹೋಗು, ಪಂಡಿತರನ್ನು ಮನೆಗೆ ಕರೆದು ಗೋಪಾಲನಿಗೆ ಶುಭ ಮುಹೂರ್ತವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಕಳುಹಿಸಿದರು." ಕೃಷ್ಣನು ಪಂಡಿತರ ಬಳಿಗೆ ಓಡಿಹೋಗಿ, ಪಂಡಿತರೇ.. ಪಂಡಿತರೇ, ನಾನು ನಿಮಗೆ ಸಾಕಷ್ಟು ಬೆಣ್ಣೆಯನ್ನು ನೀಡುತ್ತೇನೆ. ಇದರ ಬದಲಾಗಿ ನೀವು ನನಗೆ ಹಸು ಮೇಯಿಸಲು ಶುಭ ಮುಹೂರ್ತವನ್ನು ಶೀಘ್ರದಲ್ಲೇ ನೀಡಬೇಕೆಂದು ಹೇಳುತ್ತಾನೆ.

ಪಂಡಿತರು ಶ್ರೀಕೃಷ್ಣನ ಮಾತಿಗೆ ನಕ್ಕು ನಂದ ಬಾಬಾರ ಬಳಿ ಹೋಗೋಣ ಎಂದು ಹೇಳುತ್ತಾರೆ. ಪಂಡಿತರು ಪಂಚಾಂಗವನ್ನು ತೆಗೆದುಕೊಂಡು ಕೃಷ್ಣನೊಂದಿಗೆ ನಂದಬಾಬಾರವರ ಬಳಿಗೆ ಹೋದರು. ಪಂಡಿತರು ಪಂಚಾಂಗವನ್ನು ಬಹಳ ಹೊತ್ತು ನೋಡಿದರು ಮತ್ತು ಬೆರಳುಗಳ ಮೇಲೆ ಕೆಲವು ಲೆಕ್ಕಾಚಾರಗಳನ್ನು ಮಾಡಲು ಪ್ರಾರಂಭಿಸಿದರು ಆದರೆ ಬಹಳ ಸಮಯದವರೆಗೆ ಏನನ್ನೂ ಹೇಳಲಿಲ್ಲ. ನಂದಬಾಬಾ ಹೇಳಿದರು ಪಂಡಿತರೇ ಏನಾಯಿತು ನೀವು ಬಹಳ ಸಮಯಗಳಿಂದ ಏನನ್ನೂ ಹೇಳುತ್ತಿಲ್ಲ. ನಾನು ಏನು ಹೇಳಲಿ.. ಹಸುಗಳನ್ನು ಮೇಯಿಸಲು ಇಂದಿನ ಮುಹೂರ್ತದಷ್ಟು ಶುಭ ಮುಹೂರ್ತ ಮತ್ತೊಂದಿಲ್ಲ. ಹಾಗೂ ಈ ದಿನವನ್ನು ಹೊರತುಪಡಿಸಿ ಇನ್ನೊಂದು ಶುಭ ದಿನ ಮತ್ತೊಂದಿಲ್ಲ ಎಂದು ಹೇಳುತ್ತಾರೆ. ಪಂಡಿತರ ಈ ಮಾತುಗಳನ್ನು ಕೇಳಿದ ಕೃಷ್ಣ ಓಡಿಹೋಗಿ ಹಸುಗಳನ್ನು ಮೇಯಿಸಲು ಹೊರಡುತ್ತಾನೆ. ಕೃಷ್ಣನು ಹಸುವನ್ನು ಮೇಯಿಸಲು ಪ್ರಾರಂಭಿಸಿದ ಈ ದಿನವು ಕಾರ್ತಿಕ ಮಾಸದ ಶುಕ್ಲ ಪಕ್ಷದ ಅಷ್ಟಮಿ ತಿಥಿಯಾದ್ದರಿಂದ ಈ ದಿನದಂದು ಗೋಪಾಷ್ಟಮಿಯನ್ನು ಬ್ರಜ್‌ನಾದ್ಯಂತ ಆಚರಿಸಲಾಗುತ್ತದೆ. ಮತ್ತು ಗೋಮಾತೆಯನ್ನು ಶ್ರದ್ಧಾ, ಭಕ್ತಿಯಿಂದ ಪೂಜಿಸಲಾಗುತ್ತದೆ.

ಕಾರ್ತಿಕ ಶುಕ್ಲದ ಪ್ರತಿಪಾದದಿಂದ ಸಪ್ತಮಿ ತಿಥಿಯವರೆಗೆ ಶ್ರೀಕೃಷ್ಣನು ಇಂದ್ರನ ಕೋಪದಿಂದ ಬ್ರಜ್ ಜನರನ್ನು ರಕ್ಷಿಸಲು ಗೋವರ್ಧನ ಪರ್ವತವನ್ನು ತನ್ನ ಕಿರುಬೆರಳಿನಲ್ಲಿ ಎತ್ತಿ ಹಿಡಿದನು ಎನ್ನುವ ನಂಬಿಕೆಯಿದೆ. ಎಂಟನೆಯ ದಿನ, ಇಂದ್ರನ ಅಹಂಕಾರ ಮುರಿದಾಗ, ಶ್ರೀ ಕೃಷ್ಣನು ಕ್ಷಮೆ ಕೇಳಲು ಬಂದನು, ಅಂದಿನಿಂದ ಕಾರ್ತಿಕ ಮಾಸದ ಅಷ್ಟಮಿಯಂದು ಗೋಪಾಷ್ಟಮಿ ಹಬ್ಬವನ್ನು ಆಚರಿಸಲಾಗುತ್ತದೆ. ಸನಾತನ ಧರ್ಮದಲ್ಲಿ ಹಸುವನ್ನು ಅತ್ಯಂತ ಪವಿತ್ರವೆಂದು ಪರಿಗಣಿಸಲಾಗಿದೆ. ಶ್ರೀಮದ್ ಭಾಗವತದ ಕಥೆಯಲ್ಲಿಯೂ ಸಹ, ಕಾಮಧೇನುವು ಸಾಗರ ಮಂಥನದ ಸಮಯದಲ್ಲಿ ಹೊರಬಂದಾಗ, ಋಷಿಗಳು ತಮ್ಮ ಶುದ್ಧತೆಯ ಕಾರಣದಿಂದ ಅದನ್ನು ತಮ್ಮೊಂದಿಗೆ ಇಟ್ಟುಕೊಂಡರು ಎಂದು ವಿವರಿಸಲಾಗಿದೆ. ಇತರ ಹಸುಗಳು ಕಾಮಧೇನುವಿನಿಂದ ಹುಟ್ಟಿಕೊಂಡಿವೆ ಎನ್ನುವ ನಂಬಿಕೆಯಿದೆ.

ಗೋಪಾಷ್ಟಮಿಯ ದಿನ ಹಸು ಮತ್ತು ಕರುವಿಗೆ ಸ್ನಾನ ಮಾಡಿಸಿ ಪೂಜೆ ಮಾಡಿ ಅಲಂಕಾರವನ್ನು ಮಾಡುತ್ತಾರೆ. ಇದಾದ ನಂತರ ಅವುಗಳಿಗೆ ಆರತಿಯನ್ನು ಮಾಡಿ ಕೈಮುಗಿದು ನಮಸ್ಕರಿಸುತ್ತಾರೆ. 33 ಕೋಟಿ ದೇವತೆಗಳು ಗೋವಿನ ದೇಹದಲ್ಲಿ ನೆಲೆಸಿದ್ದಾರೆ, ಆದ್ದರಿಂದ ಗೋವನ್ನು ಪೂಜಿಸುವುದರಿಂದ ಆ ಎಲ್ಲಾ ದೇವತೆಗಳನ್ನು ಸ್ವಯಂಚಾಲಿತವಾಗಿ ಪೂಜಿಸಲಾಗುತ್ತದೆ. ಇದಾದ ನಂತರ ಇಡೀ ಕುಟುಂಬ ಸಮೇತ ಹಸುವಿಗೆ ಪ್ರದಕ್ಷಿಣೆ ಹಾಕಿ ಹಸಿರು ಮೇವು ತಿನ್ನಿಸುತ್ತಾರೆ. ಮನೆಯಲ್ಲಿ ಗೋವು ಇಲ್ಲದಿದ್ದರೆ ಮನೆಯ ಮುಖ್ಯ ದ್ವಾರದಲ್ಲಿ ಹಸುವನ್ನು ಕರೆದು ಸ್ನಾನ ಮಾಡಿಸಿದರೆ ಜನ್ಮ ಜನ್ಮಗಳ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಹೇಳಲಾಗುತ್ತದೆ. ಈ ದಿನ ಗೋವುಗಳ ಜೊತೆಗೆ ಶ್ರೀಕೃಷ್ಣನನ್ನೂ ಪೂಜಿಸಲಾಗುತ್ತದೆ. ಇದನ್ನು ಮಾಡುವುದರಿಂದ ವ್ಯಕ್ತಿಯು ಅದೃಷ್ಟವನ್ನು ಪಡೆಯುತ್ತಾನೆ ಎನ್ನುವ ನಂಬಿಕೆಯಿದೆ. ಸಹೋದರರಿಲ್ಲದ ಸಹೋದರಿಯರು, ಈ ದಿನ ಹಸುಗಳಿಗೆ ಭಾಯಿ ದೂಜ್ ತಿಲಕವನ್ನು ಹಚ್ಚಿ ಪೂಜೆಯನ್ನು ಮಾಡುತ್ತಾರೆ.




# ವಿಶ್ವ ದರ್ಶನ

ಡಾ. ವಿಜಯ ಸಂಕೇಶ್ವರ ಮೀಡಿಯಾ
ಸ್ಕೂಲ್ ಪ್ರಾಯೋಗಿಕ ಪತ್ರಿಕೆ

01-11-2025 ।ಶನಿವಾರ

ಸಂಪುಟ-3 ಸಂಚಿಕೆ-3 ಪುಟಗಳು-2



## ಏಕತೆಯ ಸರದಾರ

ಭಾರತವನ್ನು ಮಾನಸಿಕವಾಗಿ ಸದೃಢಗೊಳಿಸಿದ ಜೀವ, ನೇರ ನುಡಿಯ ವ್ಯಕ್ತಿತ್ವ, ಬದುಕ ಹಾದಿಯಲ್ಲಿ ಎಂದಿಗೂ ಅಂಜದ ಉಕ್ಕಿನ ಮನುಷ್ಯ, ಲೋಹ ಪುರುಷ ಸರದಾರ ವಲ್ಲಭಭಾಯಿ ಪಟೇಲರೆಂದರೆ ಮಿಡಿಯದ ಭಾರತೀಯರಿಲ್ಲ. ಕರಗದ ಮನಸುಗಳಿಲ್ಲ. ತಮ್ಮ ಬದುಕಿನ ಉದ್ದಕ್ಕೂ ಕೆಚ್ಚೆದೆಯ ಎದೆಗಾರಿಕೆಯನ್ನ ಹೊಂದಿದ್ದ ಸರಕಾರ ವಲ್ಲಭಭಾಯಿ ಪಟೇಲರು 1875, ಅಕ್ಟೋಬರ್ 31 ರಂದು, ಗುಜರಾತಿನ ಖೇಡ ಜಿಲ್ಲೆಯಲ್ಲಿ ಜನಿಸಿದರು .ಲಂಡನ್ಗೆ ಹೋಗಿ ಬ್ಯಾರಿಸ್ಟರ್ ಪದವಿಯನ್ನು ಪಡೆದುಕೊಳ್ಳಬೇಕೆಂಬ ಇವರ ಬಾಲ್ಯದ ಕನಸನ್ನ ಬಡತನ ನುಂಗಿಕೊಂಡಿತ್ತು.ತಮ್ಮ ಬಾಲ್ಯ ಹಾಗೂ ಯೌವನದ ದಿನಗಳನ್ನು ಬಡತನದ ಜೋಳಿಗೆಯಲ್ಲಿಯೇ ಕಳೆಯಬೇಕಾಯಿತು. ಬದುಕಿನೊಟ್ಟಿಗೆ ಹೋರಾಡುತ್ತಲೇ ವಕೀಲ ವೃತ್ತಿಯನ್ನು ಕಂಡುಕೊಂಡರು. ಬಡವರು ದೀನ ದಲಿತರ ಕಷ್ಟಗಳಿಗೆ ಸ್ಪಂದಿಸುತ್ತಿದ್ದ ಪಟೇಲರು ನಂತರದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವ ಮೂಲಕ ತಮ್ಮ ಬದುಕ ಪುಟದಲ್ಲಿ ಮತ್ತೊಂದು ಹೊಸ ಅಧ್ಯಾಯವನ್ನು ಬರೆದರು. ಗುಜರಾತಿನ ಖೇಡ ಜಿಲ್ಲೆಯಲ್ಲಿ ಶುರುವಾದ ಪಟೇಲರ ಹಾ ದೇಶವು ಬ್ರಿಟಿಷರ ಕಪಿಮುಷ್ಠಿಯಿಂದ ಬಿಡಿಸಿಕೊಂಡ ಮೇಲೂ ಹಿಂದೂ ಮುಸ್ಲಿಂ ಐಕ್ಯತೆಯನ್ನು ಹಾಳು ಮಾಡುವ ಬ್ರಿಟಿಷರ ಹುನ್ನಾರವನ್ನು ಮೊದಲು ವಿರೋಧಿಸಿದವರು ಪಟೇಲರು. ಸುಮಾರು 562 ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸಲು ಹಗಲು ರಾತ್ರಿ ಶ್ರಮಪಟ್ಟವರಿವರು. ಹೈದ್ರಾಬಾದ್, ಜುನಾಘಡ್, ಕಾಶ್ಮೀರವನ್ನು ಭಾರತಕ್ಕೆ ವಿಲೀನಗೊಳಿಸಲು ಸಾಧ್ಯವಿಲ್ಲ ಎಂಬಂತಹ ಮಾತುಗಳ ನಡುವೆ ಪರಿಸ್ಥಿತಿಯನ್ನು ಅತೀ ಜಾಗರೂಕತೆಯಿಂದ ನಿಭಾಯಿಸಿದರು. ಕೋಮುಹತ್ಯೆಗಳ ನಡುವೆಯೂ ಒಮ್ಮೆಯೂ ಎದೆಗುಂದದೇ ತಮ್ಮ ಕರ್ತವ್ಯವನ್ನು ಮರೆಯಲಿಲ್ಲ. ಒಪರೇಷನ್ ಪೋಲೊ ಅವರ ವ್ಯಕ್ತಿತ್ವದ ಮತ್ತೊಂದು ಮುಖ. ದೇಶದ ಏಕತೆಗೆ, ಸಮಗ್ರತೆಗೆ,ದೇಶದ ಹಿತಕ್ಕೆ ಸರದಾರ ವಲ್ಲಭಭಾಯಿ ಪಟೇಲರು ಮಾಡಿದ ತ್ಯಾಗ ನಿಜಕ್ಕೂ ಅವಿಸ್ಮರಣೀಯ. ಭಾರತ ಎನ್ನುವ ಹೆಸರು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ಪಟೇಲರು ನಮ್ಮ ದೇಶದ ಏಕತೆಯಲ್ಲಿ ಸದಾ ಜೀವಂತವಾಗಿರುತ್ತಾರೆ.

# ಸ್ವಾತಂತ್ರ್ಯ ಹೋರಾಟದ ಹೊಸ ಅಧ್ಯಾಯಕ್ಕೆ ಭಗತ್ ಬರೆದ ಮುನ್ನುಡಿ

ಪ್ರಕಾಶ ಕನ್ನೂರ



ಕ್ರಾಂತಿಕಾರಿ ಭಗತ್ ಸಿಂಗ್ ರ ವಿಚಾರ, ಆದರ್ಶ, ಸಿದ್ಧಾಂತ ಇಂದಿಗೂ ಜೀವಂತ, ವ್ಯಕ್ತಿಗಳನ್ನು ಕೊಲ್ಲಬಹುದು, ಆದರೆ ಅವರ ವಿಚಾರಗಳನ್ನಲ್ಲ" ಎಂದು ಭಗತ್ ಸಿಂಗ್ ನುಡಿದರು. ಇಂದು ಭಗತ್ ನಮ್ಮೊಂದಿಗೆ ಇಲ್ಲವೆಂದರೂ ಅವರ ವಿಚಾರ, ಆದರ್ಶ ಸಿದ್ಧಾಂತ ಇಂದಿಗೂ ಜೀವಂತವಾಗಿದೆ. ಭಗತ್ ಸಿಂಗ್ ಎಂದರೆ "ದೇಶಪ್ರೇಮಿ" "ಹುತಾತ್ಮ" ಇಂದು ಬಿಂಬಿಸುವ ಮೂಲಕ ಆರಾಧನೆ ಮಾಡುವುದಲ್ಲ. ಅವರ ಅಮೋಘ ಶಕ್ತಿ, ಕ್ರಾಂತಿಯ ಬಗ್ಗೆ ಅರಿಯಬೇಕು .

ಭಗತ್ ಸಿಂಗ್ ಎಂದರೆ ಅಪ್ರತಿಮ ದೇಶಪ್ರೇಮಿ. ಬಹಳಷ್ಟು ಮನಸ್ಸನ್ನು ಗೆದ್ದು ಸ್ಪೂರ್ತಿಯತ್ತ ಕೊಂಡೂಯ್ದ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ. ಪ್ರತಿಯೊಬ್ಬರ ಮನದಲಿ ಭಗತ್ ಸಿಂಗ್ ಇಂದಿಗೂ ಅಮರ. ಬ್ರಿಟಿಷರ ನೇಣಿಗೆ ನಗುನಗುತ್ತಲೆ ಕೊರಳೊಡ್ಡಿದ ಭಾರತದ ಏಕೈಕ ಸ್ವಾತಂತ್ರ್ಯ ಸಂಗ್ರಾಮದ ವೀರ ಎಂದರೆ ಭಗತ್. ಭಗತ್ ಸಿಂಗ್ ಜನಿಸಿದ್ದು ಸೆಪ್ಟೆಂಬರ್ 28 , 1907 ರಂದು. ಸರ್ದಾರ್ ಕಿಶನ್ ಸಿಂಗ್ ಮತ್ತು ವಿದ್ಯಾವತಿಯವರಿಗೆ ಮೂರನೆಯ ಮಗನಾಗಿ ಭಗತ್ ಜನಿಸಿದರು. ಇವರು ಸಣ್ಣ ವಯಸಿನಲ್ಲೇ ಒಬ್ಬ ಉತ್ತಮ ಓದುಗಾರ ಮಾತ್ರವಲ್ಲದೆ, ಅದ್ಭುತ ಬರಹಗಾರರು ಕೂಡ ಹೌದು. ತನ್ನ ಮನೆಯ ಜಮೀನಿನಲ್ಲಿ ಬೆಳೆ ಬೆಳೆಯುವ ಬದಲು ಬ್ರಿಟಿಷರ ವಿರುದ್ಧ ಹೋರಾಡಲು ಬಂದೂಕು, ಶಸ್ತ್ರಗಳ ಬೆಳೆ ಬೆಳೆಯುತ್ತೇನೆಂದು ಹೇಳಿದ ಧೈರ್ಯಶಾಲಿ ಬಾಲಕ. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಭಗತ್ ಸಿಂಗ್ ನ ಜೀವನದ ಮೇಲೆ ಬಹಳಷ್ಟು ಪ್ರಭಾವ ಬೀರಿತು. ಭಗತ್ ಸಿಂಗ್ ಆಗ ಪುಟ್ಟ ಬಾಲಕ.ಹತ್ಯೆ ನಡೆದ ಸ್ಥಳಕ್ಕೆ ಹೋಗಿ ರಕ್ತದ ಮಡುವಿನಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿದ್ದನ್ನು ಕಂಡು ದುಃಖಿತನಾಗಿ ಅಲ್ಲಿಂದ ಮಣ್ಣನ್ನು ತಂದು ಪಾತ್ರೆಯಲ್ಲಿ ಸಂಗ್ರಹಿಸಿಟ್ಟು ತಾನು ಪೂಜಿಸುವ ದೇವರ ಕೋಣೆಯಲ್ಲಿಟ್ಟು ಪೂಜೆ ಮಾಡುತ್ತಿದ್ದ. ಅವರ ಮನಸ್ಸು ಚಿಕ್ಕದಿನಿಂದಲೇ ದೇಶ ಸೇವೆಗಾಗಿ ಮಿಡಿಯುತ್ತಿತ್ತು. ಮುಂದೆ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿ ಬಿಟ್ಟರು. ಬ್ರಿಟಿಷರ ಮುಂದೆ ತಲೆಬಾಗದೆ ತನ್ನ ಕೊನೆಯ ಉಸಿರಿನ ತನಕ ಹೋರಾಡಿದರು. ಭಗತ್ ಸಿಂಗ್ನ ಆಳವಾದ ಚಿಂತನೆ, ಆತನ ಮಾನವೀಯ ಮೌಲ್ಯಗಳು ಎಲ್ಲರ ಮನಸ್ಸಿನ ಮೇಲೆ ಪ್ರಭಾವ ಬೀರಿವೆ. ಭವಿಷ್ಯದ ಭಾರತದ ದೇಶಕ್ಕೆ ಭಗತ್ ಎನ್ನುವ ವೀರ ಸದಾ ಆದರ್ಶವಾಗಿರುತ್ತಾನೆ.

"ವ್ಯಕ್ತಿಗಳನ್ನು ಕೊಲ್ಲಬಹುದು, ಆದರೆ ಅವರ ವಿಚಾರಗಳನ್ನಲ್ಲ" ಎಂದು ಭಗತ್ ಸಿಂಗ್ ನುಡಿದರು. ಇಂದು ಭಗತ್ ನಮ್ಮೊಂದಿಗೆ ಇಲ್ಲವೆಂದರೂ ಅವರ ವಿಚಾರ, ಆದರ್ಶ ಸಿದ್ಧಾಂತ ಇಂದಿಗೂ ಜೀವಂತವಾಗಿದೆ. ಭಗತ್ ಸಿಂಗ್ ಎಂದರೆ "ದೇಶಪ್ರೇಮಿ" "ಹುತಾತ್ಮ" ಇಂದು ಬಿಂಬಿಸುವ ಮೂಲಕ ಆರಾಧನೆ ಮಾಡುವುದಲ್ಲ. ಅವರ ಅಮೋಘ ಶಕ್ತಿ, ಕ್ರಾಂತಿಯ ಬಗ್ಗೆ ಅರಿಯಬೇಕು. ಅವರ ಚಿಂತನೆಗಳನ್ನು ನೆನಪಿಸಿ, ನಾವೆಲ್ಲರೂ ಮುನ್ನಡೆಯಬೇಕು. ಭಗತ್ ಸಿಂಗ್ ಕೇವಲ ವಸಾಹತುಶಾಹಿ ಸಾಮ್ರಾಜ್ಯದ ವಿರುದ್ಧ ಹೋರಾಡಲಿಲ್ಲ. ದೇಶದ ಶಾಂತಿ ಮತ್ತು ಸಹಬಾಳ್ವೆಗಾಗಿ ಹೋರಾಡಿದರು. ಭಾರತದ ಸ್ವಾತಂತ್ರ್ಯ ಚಳುವಳಿಗೆ ಬ್ರಿಟಿಷರ ವಿರುದ್ಧ ಹೋರಾಡಿದವರಲ್ಲಿ ರಾಜಗುರು, ಸುಖದೇವ್ ಮೊದಲಿಗರು. ಶಾಸನಸಭೆಯಲ್ಲಿ ಬಾಂಬ್ ಸ್ಫೋಟ ಮಾಡಿದರ ಪರಿಣಾಮ ಬ್ರಿಟಿಷ್ ಸರಕಾರ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಅವರು ಗಲ್ಲು ಶಿಕ್ಷೆಗೆ ಗುರಿಯಾದರು. ತಮ್ಮ ಕೊರಳು ನೇಣಿಗೆ ಹಾಕುವ ಮೊದಲು ಕೊರಳು ಕುಣಿಕೆಗೆ ಮುತ್ತಿಕ್ಕಿ ಸಾವಿನ ಕ್ಷಣದಲ್ಲೂ ಸಾವಿಗೆ ಸವಾಲಾಗಿ ನಿಂತವರು. ಕ್ರಾಂತಿ ಚಿರವಾಗಲಿ ಘೋಷಣೆಯೊಂದಿಗೆ ನೇಣುಗಂಬಕ್ಕೆ ಕೊರಳೊಡ್ಡಿದರು. ದೇಶದ ಜನತೆಗೆ ಯಾವುದೇ ಗಲ್ಲು ಶಿಕ್ಷೆ ಮಾಹಿತಿ ನೀಡದೆ ತರಾತುರಿಯಲ್ಲಿ ಗಲ್ಲು ಶಿಕ್ಷೆ ನೀಡಿದರು. ನಂತರದಲ್ಲಿ ರಹಸ್ಯವಾಗಿ ಸಟ್ಲೆಜ್ ನದಿ ತೀರದಲ್ಲಿ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್, ದೇಹವನ್ನು ರಹಸ್ಯವಾಗಿ ಸುಡುವ ಪ್ರಯತ್ನದಲ್ಲಿದ್ದರು. ಆದರೆ ಈ ವಿಷಯ ಅಲ್ಲಿಯ ಜನರಿಗೆ ತಿಳಿಯಿತು. ಅಷ್ಟರಲ್ಲೇ ಸಾವಿರಾರು ದೇಶಭಕ್ತರು ಆ ಸ್ಥಳಕ್ಕೆ ಬಂದರು. ಇದರ ಪರಿಣಾಮದಿಂದ ವೀರಪುತ್ರ ತ್ಯಾಗ ಬಲಿದಾನ ದೇಶದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ ಬಿಸಿಮುಟ್ಟಿತ್ತು. ನಂತರದ ಸ್ವಾತಂತ್ರ್ಯ ಹೋರಾಟದಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು. ಪ್ರತಿಭಟನೆಯ ದಿವ್ಯ ಜ್ಯೋತಿ ಆರದಂತೆ ಉರಿಯಲು ತನ್ನಂತವರು ಸಾಯಲೇ ಬೇಕೆಂದು ಭಗತ್ ಸಿಂಗ್ ನಂಬಿದ್ದರು ಎಂಬ ಉಲ್ಲೇಖವಿದೆ. ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವ್ ಸೇರಿದಂತೆ ಅಸಂಖ್ಯಾತ ವ್ಯಕ್ತಿಗಳನ್ನು ನಾವು ಹುತಾತ್ಮರೆಂದು ನೆನೆಯುತ್ತಿದ್ದೇವೆ. ಆದರೆ ಇಂದಿನ ಯುವ ಸಮುದಾಯವನ್ನು ಒಗ್ಗೂಡಿಸಿ ಕ್ರಾಂತಿಯ ಮಾರ್ಗದಲ್ಲಿ ಕೊಂಡೊಯ್ಯಬಲ್ಲ ಸಾಮರ್ಥ್ಯ ಇರುವುದು ಭಗತ್ ಸಿಂಗ್ ಚಿಂತನೆಗಳಲ್ಲಿ ಮಾತ್ರ. ಅಂದಿನ ಧೀರರೆ ಇಂದಿನ ಯುವ ಜನಾಂಗಕ್ಕೆ ಪೂರ್ತಿಯ ರಿಯಲ್ ಹೀರೋ ಗಳು. ಚಿಕ್ಕ ವಯಸ್ಸಿನಲ್ಲಿ ಭಾರತದ ಭವಿಷ್ಯಕ್ಕಾಗಿ ಗಲ್ಲು ಶಿಕ್ಷೆಗೆ ಗುರಿಯದ ಭಗತ್ ಸಿಂಗ್ ಸಮಾಜಕ್ಕೆ ಹಲವಾರು ಸೇವೆ ಮಾಡಲು ಬಯಸಿದರು. ಭಗತ್ ಸಿಂಗ್ ನ ಪ್ರತಿಯೊಂದು ವಿಷಯವು ನಮ್ಮೆಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಪ್ರಭಾವ ಬೀರಿದೆ.ಭಗತ್ ಸಿಂಗ್ ನಂತಹ ವೀರಯೋಧರು ಇನ್ನಷ್ಟು ಹುಟ್ಟಿ ಬರಲಿ ಎಂದು ಆಶಿಸೋಣ.

## ಭಾಷೆಗಳ ಸದುಪಯೋಗವಾಗಲಿ

ಯಲ್ಲಾಪುರ: ರಾಜ್ಯ ಸರ್ಕಾರ ನಮಗೆ ಮೂರು ಭಾಷೆಗನ್ನು ಶಿಕ್ಷಣ ನೀತಿಯ ಅಡಿಯಲ್ಲಿ ಕಡ್ಡಾಯವಾಗಿ ಕಲಿಸುತ್ತಿದೆ..ಸ್ಥಳೀಯ ಭಾಷೆಯನ್ನಾಗಿ ಕನ್ನಡ, ದೇಶ ಭಾಷೆಯನ್ನಾಗಿ ಹಿಂದಿ ಮತ್ತು ಜಾಗತಿಕ ಭಾಷೆಯನ್ನಾಗಿ ಇಂಗ್ಲಿಷನ್ನು ಕಡ್ಡಾಯವಾಗಿ ಕಲಿಸುತ್ತಿದ್ದು ನಾವೆಲ್ಲರೂ ಅದರ ಸದುಪಯೋಗ ಪಡೆಯಬೇಕು ಎಂದು ವಿಶ್ವದರ್ಶನ ಪಿ ಯು ಕಾಲೇಜಿನ ಪ್ರಾಂಶುಪಾಲ ಡಾ.ಡಿ ಕೆ ಗಾಂವ್ಕರ್ ನುಡಿದರು. ಇವರು ವಿಶ್ವದರ್ಶನ ಶಿಕ್ಷಣ ಮಹಾವಿದ್ಯಾಲಯ ಶಿಕ್ಷಣ ಸಮೂಹದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸ್ವರಸ್ವತೀ ಸಭಾಭವನದಲ್ಲಿ ನಡೆದ ಭಾಷಾ ದಿನಾಚರಣೆ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಮಾತನಾಡಿದ ಅವರು ಕೆಲವರಲ್ಲಿ ಇಂಗ್ಲಿಷ್ ಎಂದರೆ ಕಷ್ಟ ಎನ್ನುವ ಧೋರಣೆ ಇದೆ. ಇದು ದೂರವಾಗಬೇಕು 49 ಅಕ್ಷರಗಳಿರುವ ಕನ್ನಡ ಕಲಿಯುವಾಗ 26 ಅಕ್ಷರ ಇರುವ ಇಂಗ್ಲಿಷ್ ಕಲಿಯುವುದು ಅಷ್ಟು



ಕಷ್ಟವೇನಲ್ಲ. ಅದಕ್ಕಾಗಿ ವಾರಕ್ಕೆ ಕನಿಷ್ಠ ಎರಡು ಬಾರಿ ಮಾತ್ರ ಭಾಷೆಯನ್ನು ಹೊರತು ಪಡಿಸಿ ಇತರೆ ಭಾಷೆಯ ವಾಕ್ಯವನ್ನು ಬಳಸಿದರೆ ಯಾವ ಭಾಷೆಯಲ್ಲಾದರೂ ಪಾಂಡಿತ್ಯ ಪಡೆಯಬಹುದು ಎಂದು ತಿಳಿಸಿದರು.

ವಿಶ್ವದರ್ಶನ ಕನ್ನಡ ಮಾಧ್ಯಮ ಪ್ರೌಢ ಶಾಲೆ ಮುಖ್ಯೋಪಧ್ಯಾಯಿನಿ ಮುಕ್ತಾ ಶಂಕರ್ ಮಾತನಾಡಿ ಭಾಷೆಯಿಲ್ಲದೆ ಒಂದೇ ಒಂದು ದಿನ ಬದುಕಲು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಭಾಷಾ ದಿನಾಚರಣೆ ಆಯೋಜಿಸಿದ್ದು ಸಂತಸದ ವಿಷಯ. ಭಾರತ ಕಂಡಂತಹ ಮಹಾನ್ ನಾಯಕರುಗಳಲ್ಲಿ ಎಲ್ಲರೂ ಬಹು ಭಾಷೆ ಬಲ್ಲವರಾಗಿದ್ದರು. ಅದಕ್ಕಾಗಿ ಜೀವನದಲ್ಲಿ ಏನಾದರೂ ಸಾಧಿಸಬೇಕೆಂದರೆ ಬಹು ಭಾಷಾ ಪಾಂಡಿತ್ಯ ಹೊಂದಿರುವುದು ಮುಖ್ಯ. ಅದಕ್ಕಾಗಿ ಈ ರೀತಿಯ ಕಾರ್ಯಕ್ರಮಗಳನ್ನು ಆಗಾಗೇ ಹಮ್ಮಿಕೊಂಡು ಮಕ್ಕಳಿಗೆ ವೇದಿಕೆ ಕಲ್ಪಿಸಿಕೊಡುವ ಮೂಲಕ ಅವರಲ್ಲಿ ಹುಮ್ಮಸನ್ನು ತುಂಬಬೇಕು. ಆರ್ಥಿಕವಾಗಿ ಸದೃಢರಾದರು ಈ ರೀತಿಯ ಕಾರ್ಯಕ್ರಮಗಳಿಂದ ಮಾತ್ರ ನೆಮ್ಮದಿ ನೀಡಲು ಸಾಧ್ಯ ಎಂದರು.

ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ ದೀಪ ಬೆಳಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರದಲ್ಲಿ ವಿಶ್ವದರ್ಶನ ಕನ್ನಡ ಮಾಧ್ಯಮ ಪ್ರೌಢ ಶಾಲೆ ಉಪನ್ಯಾಸಕ ವೃಂದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕನ್ನಡ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರದ ಜೊತೆಗೆ ಆಯ್ದ ಪುಸ್ತಕಗಳ ಪ್ರದರ್ಶನ ಮಾಡಲಾಯಿತು. ವಿಶ್ವದರ್ಶನ ಕನ್ನಡ ಮಾಧ್ಯಮ ಪ್ರೌಢ ಶಾಲೆ ವಿದ್ಯಾರ್ಥಿಗಳಾದ ಸಂಪದಾ ಸಂಗಡಿಗರು ಪ್ರಾರ್ಥಿಸಿದರು.

ಗಣೇಶ್ ಭಟ್ ಸ್ವಾಗತಿಸಿದರು. ವಿಸ್ಮತ್ ಹೆಗಡೆ ವಂದಿಸಿರು. ಮೇಘಾ ಭಟ್ ನಿರೂಪಿಸಿದರು.

## ವಿಜ್ಞಾನ ಲೋಕದಲ್ಲಿ....

ಇಂದಿನ ಶತಮಾನವನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಶತಮಾನವೆಂದು ಕರೆಯಬಹುದು. ಮಾನವ ಇತಿಹಾಸದ ಬೆಳವಣಿಗೆಯಲ್ಲಿ ಅನೇಕ ಪರಿವರ್ತನೆಗಳು ಸಂಭವಿಸಿದರೂ, ವಿಜ್ಞಾನ ಮತ್ತು ತಂತ್ರಜ್ಞಾನ ತಂದ ಬದಲಾವಣೆಗಳು ಅತ್ಯಂತ ಕ್ರಾಂತಿಕಾರಕವಾಗಿವೆ. ವಿಜ್ಞಾನವೆಂದರೆ ಜ್ಞಾನವನ್ನು ಹುಡುಕುವ, ತಿಳಿಯುವ, ವಿಶ್ಲೇಷಿಸುವ ಶಕ್ತಿ; ತಂತ್ರಜ್ಞಾನವೆಂದರೆ ಆ ಜ್ಞಾನವನ್ನು ಮನುಷ್ಯ ಜೀವನದ ಉಪಯೋಗಕ್ಕಾಗಿ ಬಳಸುವ ಕೌಶಲ್ಯ.

ಇಂದಿನ ಜಗತ್ತು ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಚಲಿಸುತ್ತಿದೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ. ಮನುಷ್ಯನ ಬುದ್ಧಿಶಕ್ತಿ, ಕುತೂಹಲ ಮತ್ತು ಶೋಧನಾ ಮನೋಭಾವದಿಂದ ವಿಜ್ಞಾನವು ಬೆಳೆಯುತ್ತಿದೆ. ವಿಜ್ಞಾನವೆಂದರೆ ಪ್ರಕೃತಿಯ ವಿವಿಧ ಅಂಶಗಳ ಅಧ್ಯಯನ ಮತ್ತು ಅವುಗಳ ನಿಜಸ್ವರೂಪವನ್ನು ತಿಳಿಯುವ ಪ್ರಕ್ರಿಯೆಯಾಗಿದೆ. ತಂತ್ರಜ್ಞಾನವೆಂದರೆ ವಿಜ್ಞಾನದಿಂದ ಕಂಡುಹಿಡಿದ ತತ್ವಗಳನ್ನು ಮಾನವ ಜೀವನಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ಬಳಸುವ ಕಲೆಯಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವ ಜೀವನದಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿವೆ. ವಿಜ್ಞಾನದಿಂದಲೇ ವಿದ್ಯುತ್, ರೈಲು, ವಿಮಾನ, ದೂರದರ್ಶನ, ಇಂಟರ್ನೆಟ್, ಮೊಬೈಲ್ ಫೋನ್, ಕಂಪ್ಯೂಟರ್ ಮುಂತಾದ ಅನೇಕ ಆವಿಷ್ಕಾರಗಳು ಸಾಧ್ಯವಾಗಿವೆ. ಇವುಗಳು ಮಾನವನ ಜೀವನವನ್ನು ಸುಲಭ, ವೇಗವಾದ ಮತ್ತು ಸುಸಜ್ಜಿತವಾಗಿಸಿವೆ. ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದಲ್ಲಿ ಟ್ರಾಕ್ಟರ್‌ಗಳು, ನೀರಾವರಿ ಯಂತ್ರಗಳು, ಬೀಜ ಸಂಸ್ಕರಣಾ ತಂತ್ರಗಳು ಬೆಳವಣಿಗೆ ಕಂಡಿವೆ. ಕೈಗಾರಿಕೆಗಳಲ್ಲಿ ಸ್ವಯಂಚಾಲಿತ ಯಂತ್ರಗಳು, ರೋಬೋಟಿಕ್ಸ್, ಕಂಪ್ಯೂಟರ್ ವ್ಯವಸ್ಥೆಗಳು ಉತ್ಪಾದನೆಯನ್ನು ಹೆಚ್ಚಿಸಿವೆ.

ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಎರಡೂ ಬದಿಗಳಿವೆ. ಒಂದು ಕಡೆ ಮಾನವ ಹಿತ, ಇನ್ನೊಂದು ಕಡೆ ಅಪಾಯ. ವಿಜ್ಞಾನವನ್ನು ದುರುಪಯೋಗಪಡಿಸಿದರೆ ಪರಿಸರ ಮಾಲಿನ್ಯ, ಅಣುಶಸ್ತ್ರ ಅಪಾಯ, ನೈತಿಕ ಹಾನಿ ಮುಂತಾದ ಸಮಸ್ಯೆಗಳು ಉಂಟಾಗಬಹುದು. ಆದ್ದರಿಂದ ವಿಜ್ಞಾನವನ್ನು ಮನುಷ್ಯ ಹಿತಕ್ಕಾಗಿ, ಶಾಂತಿಯುತ ಉದ್ದೇಶಗಳಿಗಾಗಿ ಬಳಸಬೇಕು.

ಇಂದಿನ ವಿದ್ಯಾರ್ಥಿಗಳು ಮತ್ತು ಯುವಕರು ವಿಜ್ಞಾನ ಮನೋಭಾವದಿಂದ ಚಿಂತಿಸಿ, ನೂತನ ಆವಿಷ್ಕಾರಗಳಿಗೆ ಕೈಹಾಕಬೇಕು. ಭಾರತವು "ಡಿಜಿಟಲ್ ಇಂಡಿಯಾ", "ಮೇಕ್ ಇನ್ ಇಂಡಿಯಾ", "ಸ್ಟಾರ್ಟ್‌ಅಪ್ ಇಂಡಿಯಾ" ಮುಂತಾದ ಯೋಜನೆಗಳ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಉತ್ತೇಜಿಸುತ್ತಿದೆ. ಈ ಕ್ಷೇತ್ರಗಳಲ್ಲಿ ಯುವ ಪೀಳಿಗೆ ಪಾಲ್ಗೊಂಡರೆ ದೇಶದ ಪ್ರಗತಿ ವೇಗವಾಗುತ್ತದೆ.

ಒಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವ ಪ್ರಗತಿಯ ಎರಡು ಕಂಬಗಳಿದ್ದಂತೆ. ಅವುಗಳ ಸದುಪಯೋಗದಿಂದ ಮಾನವ ಜೀವನ ಸುಖಕರವಾಗಬಹುದು. ಆದರೆ ಅದರ ದುರುಪಯೋಗವು ಮಾನವಕುಲದ ನಾಶಕ್ಕೆ ಕಾರಣವಾಗಬಹುದು. ಆದ್ದರಿಂದ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಮಾನವೀಯ ಮೌಲ್ಯಗಳೊಂದಿಗೆ ಸಂಯೋಜಿಸಿ ಬಳಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯವಾಗುತ್ತದೆ.

## ಕನ್ನಡ ಏನೆ ಕುಣಿದಾಡುವುದೆನ್ನೆದೆ...

ಮೊದಲ ಪುಟದಿಂದ..

### ಕನ್ನಡವೆಂದರೆ ಕೀಳರಿಮೆ ಏಕೆ?

"ಕಲಿಯೋಕೆ ಕೋಟಿ ಭಾಷೆ,ಆಡೋಕೆ ಒಂದೇ ಭಾಷೆ" ಎನ್ನುವ ಸಿನಿಮಾ ಹಾಡೊಂದಿದೆ. ಕನ್ನಡ ಅದೆಷ್ಟೇ ಶ್ರೀಮಂತ ಭಾಷೆ ಎಂದರೂ ಕೂಡಾ ಕೆಲವರಿಗೆ ಕನ್ನಡವೆಂದರೆ ಏನೋ ಅಸಡ್ಡೆ,ಕೋಪ, ಕೀಳರಿಮೆ.ಅದೇಕೆ ಹೀಗೆ? ಪ್ರಪಂಚದಲ್ಲಿ ಇಂದು ಎಷ್ಟೋ ಭಾಷೆಗಳು ಜೀವಂತವಾಗಿಲ್ಲ. ಕೆಲವೊಂದರ ಕುರುಹು ಕೂಡಾ ಇಲ್ಲ.ಕೆಲವರಿಗೆ ಅತಿಯಾದ ಇಂಗ್ಲಿಷ್ ವ್ಯಾಮೋಹ. ಇಂಗ್ಲಿಷ್ನಲ್ಲಿ ವ್ಯವಹರಿಸಿದರೆ ಮಾತ್ರ ಜನರು ತನ್ನನ್ನು ಗುರುತಿಸುತ್ತಾರೆ ಎಂಬ ತಪ್ಪು ಕಲ್ಪನೆ.ಆಲೋಚನೆ ಸುಳ್ಳಲ್ಲ.ಬದಲಾಗುತ್ತಿರುವ ಇಂದಿನ ಕಾಲಮಾನದಲ್ಲಿ ಖಂಡಿತವಾಗಿ ಇಂಗ್ಲಿಷ್ ಬೇಕೇ ಬೇಕು.ವ್ಯವಹಾರಕ್ಕೆ, ಜ್ಞಾನಕ್ಕೆ ಆ ಭಾಷೆಯೇ ಇರಲಿ.ಆದರೆ ಮನೆಯಲ್ಲಿ, ಅಕ್ಕಪಕ್ಕದ ಸಾಮಾನ್ಯ ವ್ಯವಹಾರಗಳಲ್ಲೂ ಕನ್ನಡವನ್ನ ಬಳಸದಿದ್ದರೆ ಹೇಗೆ? ನಮ್ಮ ಸಮಾಜ ಕನ್ನಡದ ವಿಷಯದಲ್ಲಿ ಎಡವುತ್ತಿರುವುದು ಇಲ್ಲಿಯೇ. ನಮಗೆ ನೆಲ ಜಲ ಕೊಟ್ಟು ಪೊರೆಯುತ್ತಿರುವ ಕನ್ನಡಕ್ಕೆ ನಾವೇನು ಮಾಡಿದ್ದೇವೆ? ನಮ್ಮಲ್ಲಿ ಕನ್ನಡ ರಾಜ್ಯೋತ್ಸವದ ದಿನ ಮಾತ್ರ ನಮ್ಮಲ್ಲಿ ಕೆಲವರಲ್ಲಿ ಆಡಂಬರದ ಅಭಿಮಾನ ಉಕ್ಕಿ ಹರಿಯುತ್ತದೆ. ರಾಜ್ಯೋತ್ಸವದ ದಿನ ಮಾತ್ರ ಎಲ್ಲರ ಬಾಯಲ್ಲೂ ಕನ್ನಡ. ಕನ್ನಡದ ಮೇಲೆ ಹೆಮ್ಮೆ,, ಅಭಿಮಾನ, ಸಾಮಾಜಿಕ ಜಾಲತಾಣಗಳಲ್ಲಂತೂ ಪ್ರೀತಿ ಉಕ್ಕಿ ಹರಿಯುತ್ತಿರುತ್ತದೆ.ರಾಜ್ಯೋತ್ಸವ ಕಳೆದು ಮತ್ತೆ ಮರುದಿನದಿಂದಲೇ ಹೊಸ ಬಟ್ಟೆ ಕಳಚಿಕೊಂಡ ಬಡವಿಯಂತಾಗುತ್ತದೆ ಕನ್ನಡದ ಸ್ಥಿತಿ. ಇದಾಗಬಾರದು. ಒಂದು ಭಾಷೆ ಉಳಿಯುವುದು ಸಾಯುವುದು ಆ ಭಾಷೆಯನ್ನು ಬಳಸುವುದರ ಮೇಲಿರುತ್ತದೆ. ನಮ್ಮೆಲ್ಲರ ಮೊದಲ ಆದ್ಯತೆ ಕನ್ನಡವಾಗಿರಬೇಕು. ವ್ಯವಹಾರ, ಜ್ಞಾನದ ಉದ್ದೇಶಕ್ಕೆ ಸಾವಿರ ಭಾಷೆಯನ್ನು ಬಳಸಿದರೂ ಕೂಡಾ ಆಡು ಭಾಷೆಯನ್ನು ಮರೆಯಬಾರದು. ಕನ್ನಡ ನೆಲ ಜಲ ಸಂಸ್ಕೃತಿಗಾಗಿ ಕನ್ನಡಿಗರೆಲ್ಲ ಒಟ್ಟುಗೂಡಬೇಕು.ಒಗ್ಗಟ್ಟಾಗಬೇಕು. ಕನ್ನಡ ಎಂದರೆ ತಾಯಿ ಎಂಬ ಭಾವ ಪ್ರತಿಯೊಬ್ಬರಲ್ಲೂ ಮೂಡಿದಾಗ ಮಾತ್ರ ಕನ್ನಡ ರಾಜ್ಯೋತ್ಸವ ಸಂಭ್ರಮಕ್ಕೆ ಒಂದು ಅರ್ಥ ಸಿಕ್ಕಂತೆ ಆಗುತ್ತದೆ.



ಮಾರ್ತೋಮಾ ಸೆಂಟ್ರಲ್ ಶಾಲೆಯಲ್ಲಿ ತಮ್ಮ ಕಲೆಗಳನ್ನು ಪ್ರದರ್ಶಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು.

## ಪ್ರತಿಭಾ ಪ್ರದರ್ಶನದಲ್ಲಿ ವಿದ್ಯಾರ್ಥಿಗಳ ಸಾಧನೆ

ಹೊನ್ನಾವರ: ಮಾರ್ತೋಮಾ ಸೆಂಟ್ರಲ್ ಶಾಲೆ, ಹೊನ್ನಾವರ ಇವರ ಆಶ್ರಯಲ್ಲಿ 25 ಅಕ್ಟೋಬರ್ 2025 ರಂದು ನಡೆಸಿದ ಸಿಬಿಎಸ್ಸಿ ಸಾಂಸ್ಕೃತಿಕ ಹಬ್ಬದಲ್ಲಿ ಯಲ್ಲಾಪುರದ ವಿಶ್ವ ದರ್ಶನ ಕೇಂದ್ರೀಯ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಕಲೆಗಳನ್ನು ಪ್ರದರ್ಶಿಸಿ ಪ್ರಶಸ್ತಿ ಗಳಿಸಿದ್ದಾರೆ.

ಜೂನಿಯರ್ ವಿಭಾಗದ **English Elocution** ಸ್ಪರ್ಧೆಯಲ್ಲಿ ಆಸ್ತಾ ಅರುಣ ಶೆಟ್ಟಿ ಪ್ರಥಮ ಸ್ಥಾನ ಪಡೆದರೆ, ಸೀನಿಯರ್ ವಿಭಾಗದಲ್ಲಿ ನಮನ್ ಎಸ್. ಕೆ ಮೊದಲ ಸ್ಥಾನ ಪಡೆದನು.ಜನಪದ ಹಾಡು ವಿಭಾಗದಲ್ಲಿ ಯುಕ್ತಾ ಭಾಗ್ವತ್,ಅವನಿ ಕೇಸರಕರ,ಸಾನಿಧ್ಯಾ ಗಾಂವ್ಕರ್, ಆಧ್ಯಾ ಪಟೇಲ್, ದೀಕ್ಷಾ ಹೆಗಡೆ, ಸಾನ್ವಿ ಇನಾಮದಾರ್ ಇವರ ತಂಡ ಪ್ರಥಮ ಸ್ಥಾನ ಗಳಿಸಿತು. ನ್ಯೂಸ್ ಕಾಲೇಜು ವಿಭಾಗದಲ್ಲಿ ಗೌತಮ ಬಿ ಮತ್ತು ಸೋನಾಲಿ ಅರುಣ್ ಬಂಡಾರಿ ಮೂರನೇ ಸ್ಥಾನ ಪಡೆದರು.

ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಮುಖ್ಯಾಧಿಕಾರಿ, ಶಿಕ್ಷಕ ವೃಂದ ಹಾಗೂ ಪಾಲಕರು ಅಭಿನಂದನೆ ವ್ಯಕ್ತಪಡಿಸಿದ್ದಾರೆ. ಪ್ರತಿಭೆಯ ಈ ಸಾಧನೆ ಶಾಲೆಯ ಗೌರವವನ್ನು ಮತ್ತಷ್ಟು ಹೆಚ್ಚಿಸಿದೆ.


ಪ್ರಧಾನ ಸಂಪಾದಕ: ಹರಿಪ್ರಕಾಶ ಕೋಣೆಮನೆ, ಸಹಾಯಕ ಸಂಪಾದಕ: ವಿನಯ ಹೆಗಡೆ, ವೆಂಕಟೇಶ ಗೇರಗದ್ದೆ, ಸ್ಫೂರ್ತಿ ಹೆಗಡೆ. ಪೂಜಾ ಹುನಕುಪ್ಪಿ, ವಿದ್ಯಾರ್ಥಿ ಸಂಪಾದಕರು: ಶಿಲ್ಪಾ ಪೂಜಾರಿ, ರಾಧಾ ವಾಲಿಕಾರ, ಜಾನು ಕೊಕರೆ, ಜುಬಿನ ಕಾಂಬಳೆ, ಪ್ರಕಾಶ ಕನ್ನೂರ

ವಿಳಾಸ: ವಿಶ್ವದರ್ಶನ ಶಿಕ್ಷಣ ಸಂಸ್ಥೆ ಗಣೇಶಪುರಂ, ಯಲ್ಲಾಪುರ. ಸಂಪುಟ-3 ಸಂಚಿಕೆ-3